ಎದ್ದುನಿಂತ ಮೆಹೆಕ್, ಅಮ್ಮನಿಗಿಂತ ವೇಗವಾಗಿ ಬಾಗಿಲ ಬಳಿ ನಡೆದು ನಿಂತಳು. ಮಗಳನ್ನು ಕಣ್ಣು ತುಂಬಾ ನೋಡಿದ ಸಾಲಿಹಾ, ''ಅರ್ಧ ಗಂಟೆಯಲ್ಲಿ ಬಂದು ಬಿಡ್ತೀನಿ. ಅಲ್ಲಿವರೆಗೆ ಹಸಿದುಕೊಂಡು ಇರಬೇಡ. ಒಂದಿಷ್ಟು ಶಾವಿಗೆ ಪಾಯಸ ಮಾಡಿದ್ದೇನೆ. ಒಂದು ಬಟ್ಟಲು ಅದನ್ನಾದರೂ ಕುಡಿದಿರು" ಎಂದು ಹೇಳಿ ಮಗಳನ್ನು ಕಣ್ಣು ತುಂಬಾ ನೋಡಿ ವೇಗವಾಗಿ ನಡೆದಳು.

ಅವಳು ಬುರ್ಖಾವನ್ನು ಸರಿಪಡಿಸಿಕೊಂಡು ದಾಪುಗಾಲು ಹಾಕಿ ನಡೆಯುತ್ತಿದ್ದಂತೆಯೇ ಎಲ್ಲಾ ಬಿಟ್ಟು ಫೈಜಾ ಎದುರಿಗೆ ಬರಬೇಕೆ? ಅವಳನ್ನು ಕಂಡರೆ ಕಾಣದಂತೆ ಮುಂದಡಿ ಇಡಬೇಕೆಂದು ಅವಳು ಯೋಚಿಸುತ್ತಿರುವಾಗಲೇ ಫೈಜಾ ಅವಳೆದುರಿಗೆ ಬಂದು ಗಕ್ಕನೆ ಬ್ರೇಕ್ ಹಾಕಿದಳು. ಹಾಗೆಯೇ ಅವಳು ನೆಲಕ್ಕೆ ಕಾಲೂರಿ ಮಾತನಾಡಲು ನಿಂತಾಗ ಅವಳು ಸುಲಭಕ್ಕೆ ಬಿಡುವವಳಲ್ಲ ಎಂದು ಸಾಲಿಹಾಗೆ ಅನಿಸಿತು. ಫೈಜಾಳೊಡನೆ ಮಾತಿಗೆ ನಿಲ್ಲುವಲ್ಲಿ ಸಾಲಿಹಾಗೆ ಅಭ್ಯಂತರವೇನೂ ಇರಲಿಲ್ಲ. ಆದರೆ ಇಮ್ರಾನಾಳ ಮನೆಗೆ ಹೋಗಲೇಬೇಕಾದ ತುರ್ತು ಅವಳಿಗೆ ಇದ್ದುದರಿಂದ ಅವಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಳು. ಆದರೆ ಫೈಜಾ ಬಿಡಬೇಕಲ್ಲ. "ಸಾಲಿಹಾ ಚಿಕ್ಕಮ್ಮ, ಅರ್ಜೆಂಟ್ ಏನು ಇಲ್ಲಾ ತಾನೇ? ಎಲ್ಲಿ ಹೋಗಬೇಕು ನಾನೇ ಬಿಡ್ತೀನಿ" ಎಂದು ತನ್ನ ಸ್ಕೂಟಿಯ ಮೇಲೆ ಏರಿಸಿಕೊಂಡು ರಸ್ತೆಯುದ್ದಕ್ಕೂ ಚಟಪಟನೆ ಮಾತನಾಡಲಾರಂಭಿಸಿದಳು.

ಇಮ್ರಾನಾಳ ಮನೆಯ ಮುಂಭಾಗದಲ್ಲಿ ಸಾಲಿಹಾಳನ್ನು ಇಳಿಸಿ ಫೈಜಾ ತನ್ನ ಧ್ವನಿಯನ್ನು ಇನ್ನಷ್ಟು ತಗ್ಗಿಸಿ, ''ಚಿಕ್ಕಮ್ಮ ಮೆಹೆಕ್‌ಳ ಆರೋಗ್ಯ ಹೇಗಿದೆ?'' ಎಂದು ಕೇಳಿದಳು. ಮತ್ತು ತನ್ನ ಧ್ವನಿಯನ್ನು ಇನ್ನಷ್ಟು ತಗ್ಗಿಸಿ, ''ನೋಡಿ ಚಿಕ್ಕಮ್ಮ, ನಮ್ಮ ದೇಹಕ್ಕೆ ಕಾಯಿಲೆಯಾದರೆ ನಾವು ಡಾಕ್ಟರ ಬಳಿ ಹೋಗ್ತೀವಿ. ಆದರೆ ಮನಸ್ಸಿಗೆ ಕಾಯಿಲೆಯಾದರೆ ದೆವ್ವ ಪಿಶಾಚಿ ಅದು ಇದು ಅಂತ ಇಲ್ಲದ್ದನ್ನು ಮಾಡಿ ಪ್ರಾಣ ತೆಗೀತೀವಿ".

''ಥೂ ಬಿಡ್ತು ಅನ್ನು ಫೈಜಾ. ನಾನಂತೂ ಅವಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳುತ್ತೇನೆ. ಆದರೆ ಮದುವೆಯಾಗುವ ಹುಡುಗಿ. ಹೀಗೆ ಅನಾರೋಗ್ಯ ಅಂತ ಗೊತ್ತಾದರೆ ವರ ಎಲ್ಲಿ ಸಿಗತ್ತೆ ಹೇಳು. ಅದಕ್ಕೆ ಯಾರಲ್ಲಿಯೂ ನಾನು ಹೇಳೋಕೆ ಹೋಗೋದಿಲ್ಲ. ನಿನಗೊಬ್ಬಳಿಗೆ ಮಾತ್ರ ಗೊತ್ತು. ಅದೂ ಕೂಡ ಮೊದಲಿನಿಂದಲೂ ನೀನು ಅವಳ ಬಗ್ಗೆ ತುಂಬಾ ಪ್ರೀತಿ ಇಟ್ಟುಕೊಂಡಿರುವುದರಿಂದ ನಿನ್ನ ಜೊತೆಯಲ್ಲಿ ಹೇಳಿಕೊಂಡಿದ್ದೇನೆ."

''ಯಾವ ಡಾಕ್ಟರರ ಹತ್ತಿರ ತೋರಿಸ್ತಾ ಇದೀರಾ?'' ಸಾಲಿಹಾ ಉತ್ತರಿಸುವುದಕ್ಕೆ ಮುಂಚೆಯೇ ಇಮ್ರಾನಾ ಮುಂಬಾಗಿಲ ಬಳಿ ನಿಂತಿದ್ದಳು. "ಅರೇ ಅರೇ ಸಾಲಿಹಾ ಅಕ್ಕ ಇಲ್ಲಿ ಯಾಕೆ ನಿಂತಿದ್ದೀರಾ? ಬನ್ನಿ ಬನ್ನಿ ಮನೆಯೊಳಗೆ ಬನ್ನಿ" ಎಂದು ಅವಳು ವಿಶೇಷವಾಗಿ ಆಹ್ವಾನಿಸುತ್ತಾ ಫೈಜಾಳನ್ನು ಕಂಡು, ''ಓಹೋ ಮದುವಣಗಿತ್ತಿ. ಅಲ್ಲೇ ನಿಂತಿದೀಯ ಬಾ ಮನೆಗೆ. ಎಷ್ಟು ದಿನ ಆಯ್ತು ನಿನ್ನನ್ನ ನೋಡಿ" ಎಂದು ಅವಳನ್ನು ಕೂಡ ಆತ್ಮೀಯವಾಗಿ ಕರೆದಳು. ಫೈಜಾ ಅವಳ ಕರೆಗೆ ಓಗೊಡದೆ, ''ಇಲ್ಲ ದೀದಿ. ನಾನು ಈಗ ಅರ್ಜೆಂಟ್ ಆಗಿ ಹೋಗಬೇಕು. ಸಾಯಂಕಾಲ ಬರ್ತೀನಿ. ಅದೂ ಕೂಡ ಮಕ್ಕಳನ್ನು ಮಾತನಾಡಿಸಲು ಬರಬೇಕು" ಎಂದು ತನ್ನ ಸ್ಕೂಟಿಯೊಡನೆ ಮಾಯವಾದಳು.

ಇಮ್ರಾನಾಳ ಮನೆಯಲ್ಲಿ ಸಡಗರ ಮತ್ತು ಸಂಭ್ರಮದ ದರ್ಬಾರು ನಡೆಯುತ್ತಿತ್ತು. ಅವಳು ದುಬೈನಿಂದ ಮರಳಿದ್ದು ಸಾಕಷ್ಟು ಸಾಮಗ್ರಿಯನ್ನು ಹೊತ್ತು ತಂದಿದ್ದಳು. ಅವಳಿಗೆ ಸಾಲಿಹಾ ಬಹಳ ದಿನಗಳಿಂದ ಬೆಡ್‌ಶೀಟ್‌ನ ಸೆಟ್‌ಗಳನ್ನು ತರುವಂತೆ ಹೇಳುತ್ತಲೇ ಇದ್ದಳು. ಇಮ್ರಾನಾ ಸಾಲಿಹಾಳನ್ನು ತಮ್ಮ ಬೆಡ್ ರೂಂಗೆ ಕರೆದೊಯ್ದಳು. ಇನ್ನೂ ಬಹಳಷ್ಟು ಸಾಮಗ್ರಿಗಳನ್ನು ಅನ್ ಪ್ಯಾಕ್ ಮಾಡುವುದಿತ್ತು. ಮಂಚ, ಡ್ರೆಸ್ಸಿಂಗ್ ಟೇಬಲ್, ಚೇರು ಹಾಗೂ ಟೇಬಲ್ಲಿನ ಮೇಲೆ ಎಂತೆಂತಹ ವಿದೇಶಿ ಮೇಕಪ್ ವಸ್ತುಗಳು, ಸುಗಂಧ ದ್ರವ್ಯಗಳು ರಾರಾಜಿಸುತ್ತಿವೆ. ಅವಳ ಕೊರಳಲ್ಲಿ